ಎಂದು ಕೇಳಿದ ಕೂಡಲೆ ಪ್ರೇಕ್ಷಕರ ಗುಂಪಿನಲ್ಲಿ ಕಣ್ಮರೆಯಾದಳು. ಆದರೆ ಅವಳು ನನ್ನ ಮನಸ್ಸಿನಲ್ಲಿ ನೆಲೆಸಿದ್ದಳು. ನನಗೆ ಅವಳ ಹೆಸರು, ನೀನಾ ಶ್ರೀವಾಸ್ತವ ಎಂಬುದು ನೆನಪಾಯಿತು. ಅವಳು ಯಾವ ಹೋಟೆಲ್‌ನಲ್ಲಿ ಉಳಿದಿದ್ದಾಳೆ ಎಂಬುದು ಸಹ ನೆನಪಾಯಿತು. ಮರುದಿನ ಬೆಳಿಗ್ಗೆ ಎಪೆಕ್ಸ್ ಹೋಟೆಲ್‌ಗೆ ಹೋದೆ. ಅವಳ ಬಗ್ಗೆ ರಿಸೆಪ್ಷನ್‌ನಲ್ಲಿ ವಿಚಾರಿಸಿದೆ. ಅವರು ಅವಳ ರೂಮಿಗೆ ಫೋನ್ ಮಾಡಿದರು. ಯಾರೂ ಮಾತನಾಡಲಿಲ್ಲ. ಕಡೆಗೆ ಅವರು ಕೋಣೆಯಲ್ಲಿಲ್ಲವೆಂದು ತೋರುತ್ತೆ ಎಂದರು. ನಾನು ಅಲ್ಲಿ ಅವಳಿಗಾಗಿ ಒಂದು ಗಂಟೆಯವರೆಗೆ ಕಾದೆ. ಹೋಟೆಲ್ ಲಾಬಿಯಲ್ಲಿ, ಗಾರ್ಡನ್ ಪಾರ್ಕಿಂಗ್ ಪ್ಲೇಸ್‌ನಲ್ಲಿ ಅವಳಿಗಾಗಿ ಹುಡುಕಾಡಿದೆ. ಹೋಟೆಲ್‌ನ ಸುತ್ತಮುತ್ತ ಅಡ್ಡಾಡಿದೆ. ಅವಳೆಲ್ಲೂ ಕಾಣಬರಲಿಲ್ಲ. ನಂತರ ಸೋತು ಮನೆಗೆ ಮರಳಿ ಹೋದೆ. ಇಂಟರ್ನೆಟ್ ಓಪನ್ ಮಾಡಿ ಅವಳಿಗಾಗಿ ಲಿಂಕ್‌ಡೆನ್‌ನಲ್ಲಿ ಹುಡುಕಾಡಿದಾಗ ಅವಳ ಪ್ರೊಫೈಲ್ ಲಭಿಸಿತು. ಅವಳಿಗೆ ಮೆಸೇಜ್ ಕಳುಹಿಸಿದೆ.

'ಸಾರಿ, ನಿನ್ನೆ ನಿಮ್ಮೊಂದಿಗೆ ಹೆಚ್ಚು ಮಾತನಾಡದಾದೆ. ನಾನು ತುಂಬಾ ಬಿಜಿಯಾಗಿದ್ದೆ. ನೀವು ಬಯಸಿದರೆ ಎಲ್ಲಾದರೂ ಭೇಟಿಯಾಗೋಣ. ನಾನು ನಿಮ್ಮ ಹೋಟೆಲ್‌ನಿಂದ ತುಂಬಾ ದೂರವೇನಿಲ್ಲ.'

ಎರಡು ಗಂಟೆಗಳ ನಂತರ ನಾನು ಎಪೆಕ್ಸ್ ಹೋಟೆಲ್‌ನ ಲಾಬಿಯಲ್ಲಿದ್ದೆ. ಅವಳಿಗೆ ನಾನು ಬಂದಿದ್ದೇನೆಂದು ಫೋನ್ ಮಾಡಿದೆ. ಅವಳು ತನ್ನ ರೂಮಿನಿಂದ ಕೆಳಗಿಳಿದು ಬಂದಳು. ನಾವು ಪರಸ್ಪರ ಗುರುತಿಸಲು ಒಂದು ಕ್ಷಣ ಹಿಡಿಯಿತು.

'ಹಾಯ್'.

'ಹಾಯ್'.

'ನಿನ್ನೆ ನೀವು ಟ್ರೆಡಿಷನಲ್ ಡ್ರೆಸ್‌ನಲ್ಲಿದ್ದಿರಿ, ಹೀಗಾಗಿ ಭಿನ್ನವಾಗಿ ಕಾಣಿಸುತ್ತಿದ್ದಿರಿ. ಇವತ್ತು ಶರ್ಟ್ ಪ್ಯಾಂಟಿನಲ್ಲಿ ಗುರುತು ಸಿಕ್ಕಿಲ್ಲ' ಅವಳು ನನ್ನನ್ನು ಆಪಾದಮಸ್ತಕ ನೋಡಿದಳು.

'ನಾನು ಯಾವ ಉಡುಪಿನಲ್ಲಿ ಹೆಚ್ಚು ಇಷ್ಟವಾಗ್ತೀನಿ?'

ಅವಳು ನನ್ನ ಪ್ರಶ್ನೆಯ ಬಗ್ಗೆ ಸ್ವಲ್ಪ ಯೋಚಿಸಿ ಹೇಳಿದಳು, 'ನೀವು ಸ್ಟೇಜ್‌ನಲ್ಲಿದ್ದಾಗ ಕಿಲ್ಟ್‌ನಲ್ಲಿ (ಪರಂಪರಾಗತ ಉಡುಪು). ಪ್ಯಾಂಟ್ ಶರ್ಟ್‌ನಲ್ಲಿ ಎಲ್ಲಾ ಪುರುಷರು ಇಷ್ಟವಾಗ್ತಾರೆ. ಇದು ಪುರುಷರ ಇಂಟರ್‌ನ್ಯಾಷನಲ್ ಡ್ರೆಸ್'.

ನನಗೆ ಅವಳ ಉತ್ತರ ಇಷ್ಟವಾಯಿತು. ಮಾತಿನ ನಡುವೆಯೇ, 'ನಾನು ರಿಜಿಸ್ಟರ್ಡ್ ಟೂರಿಸ್ಟ್ ಗೈಡ್ ಸಹ ಆಗಿದ್ದೇನೆ, ಮಾನ್ಯತೆ ಪಡೆದ ರಾಷ್ಟ್ರೀಯ ಸಂಸ್ಥೆಯೊಂದರಿಂದ ಟೂರಿಸ್ಟ್ ಗೈಡ್ ಸರ್ಟಿಫಿಕೇಟ್ ಪಡೆದಿದ್ದೇನೆ. ಹಿಸ್ಟಾರಿಕಲ್ ಪ್ಲೇಸಸ್ ಟೂರ್ ಮಾಡಿಸುವಲ್ಲಿ ನನಗೆ ವಿಶೇಷ ಆಸಕ್ತಿಯಿದೆ, ಆದರೆ ನಾನು ಉದ್ಯಾನಗಳು, ಕ್ರೀಡಾ ಸ್ಥಳಗಳು, ಫಿಲ್ಮ್ ಪ್ಲೇಸಸ್, ಪ್ರಾಕೃತಿಕ ಸ್ಥಳಗಳು, ಚಾರಿತ್ರಿಕ ಸಂಗ್ರಹಾಲಯಗಳು, ಸರ್ಕಾರಿ ಕಟ್ಟಡಗಳು, ಅರಮನೆಗಳು ಇತ್ಯಾದಿ ಜಾಗಗಳಿಗೂ ಟ್ರಿಪ್ ಕರೆದೊಯ್ಯುವಲ್ಲಿ ಸಮರ್ಥನಾಗಿದ್ದೇನೆ' ಎಂದೆ. ನಂತರ ನಿಮಗೆ ನಗರದಲ್ಲಿ ಸುತ್ತಾಡಿಸಬಲ್ಲೆ ಎಂದೂ ಹೇಳಿ, ನನ್ನ ಟೂರಿಸ್ಟ್ ಸರ್ಟಿಫಿಕೇಟನ್ನು ತೋರಿಸಿದೆ.

'ನೀವು ಏನೇನಾಗಿದ್ದೀರ?' ಅವಳಿಗೆ ಆಶ್ಚರ್ಯವಾಯಿತು.

'ಮೊಟ್ಟ ಮೊದಲಿಗೆ ನಾನೊಬ್ಬ ಅಧ್ಯಾಪಕ. ಡಾನ್ಸ್ ಮಾಡುವುದು ನನ್ನ ಹವ್ಯಾಸ. ಟೂರಿಸ್ಟ್ ಗೈಡ್ ನನ್ನ ಪಾರ್ಟ್ ಟೈಮ್ ಜಾಬ್. ನೀವು ಬಯಸಿದರೆ ನಿಮಗೆ ಫ್ರೀ ವಾಕಿಂಗ್ ಟೂರ್ ಕೊಡಬಲ್ಲೆ. ನಿಮಗೆ ಇಷ್ಟವಾದಷ್ಟು ಟಿಪ್ಸ್ ಕೊಡಿ, ಸಾಕು'.

ಅವಳು ಸಂತೋಷದಿಂದ ಒಪ್ಪಿದಳು. ನಾನು ತಾಯಿಮಗಳಿಗೆ ಗೈಡ್ ಆದೆ. ಮರುದಿನ ಬೆಳ್ಳಂಬೆಳ್ಳಿಗ್ಗೆ ನಾನು ಅವರನ್ನು ಸಿಟಿ ಸ್ಕ್ವಾಯರ್ ಬಳಿ ಭೇಟಿಯಾದೆ. ಅವಳು ತನ್ನ ಹೆಣ್ಣುಮಕ್ಕಳೊಂದಿಗೆ ಈ ಮೊದಲೇ ಅಲ್ಲಿ ನಿಂತಿದ್ದಳು.

ನೀನಾಳ ಹಾವಭಾವ ವಿಚಿತ್ರವಾಗಿತ್ತು. ಹೀಗಾಗಿ ಅವಳು ವಾಸ್ತವವಾಗಿ ಯಾವ ದೇಶದವಳು ಎಂಬುದು ನನಗೆ ಅರ್ಥವಾಗುತ್ತಿರಲಿಲ್ಲ. ಕಡೆಗೆ ಅವಳನ್ನೇ ನಿಮ್ಮ ಜಾತಿ ಯಾವುದು ಎಂದು ಕೇಳಿದೆ.

'ನನ್ನ ಮೂಲ ಇಂಡಿಯಾ, ಆದರೆ ಹುಟ್ಟಿದ ದಿನದಿಂದ ಡೆನ್ಮಾರ್ಕ್‌ನಲ್ಲಿದ್ದೇನೆ'.

'ಅರೆ, ವಾಹ್!' ನನ್ನ ಬಾಯಿಯಿಂದ ಅನಾಯಾಸವಾಗಿ ಈ ಶಬ್ದಗಳು ಬಂದವು. ಈ ಜಗತ್ತು ವಿಚಿತ್ರ ಸಂಯೋಗಗಳಿಗೆ ಸಾಕ್ಷಿಯಾಗಿದೆ. ಸಂಯೋಗವೆಂಬುದು ನಮ್ಮ ಅದೃಷ್ಟ. ನಾವು ಒಬ್ಬರನ್ನು ಆಕಸ್ಮಿಕವಾಗಿ ಭೇಟಿಯಾಗಲ್ಲ, ಅದಕ್ಕೊಂದು ಕಾರಣವಿರುತ್ತದೆ, ಒಂದು ಆಕರ್ಷಣೆಯಿರುತ್ತದೆ. ನಾನು ಸ್ಕಾಟಿಶ್, ಆದರೆ ನನ್ನ ಶರೀರದಲ್ಲಿ ಇಂಡಿಯನ್ ಡಿಎನ್‌ಎ ಗುರುತುಗಳಿವೆ.

'ನಾನು ಸಹ ಸ್ವಲ್ಪ ಇಂಡಿಯನ್. ನನ್ನ ಗ್ರೇಟ್ ಗ್ರೇಟ್ ಗ್ರಾಂಡ್‌ಮದರ್ ಇಂಡಿಯಾದವರಾಗಿದ್ದರು.'

ಅವಳು ತನ್ನ ಪರೀಕ್ಷಕ ದೃಷ್ಟಿಯಿಂದ ನನ್ನನ್ನು ಮತ್ತೆ ಆಪಾದಮಸ್ತಕ ನೋಡುತ್ತಾ ಹೇಳಿದಳು, 'ಹೂಂ, ನೀವು ಪೂರ್ಣವಾಗಿ ವೈಟ್ ಅಂತ ಅನ್ನಿಸಲ್ಲ. ನಿಮ್ಮ ಬಿಳಿ ಬಣ್ಣ ಯೂರೋಪಿಯನ್ ಬಿಳಿ ಅಲ್ಲ. ನಿಮ್ಮದು ಮಿಡಲ್ ಈಸ್ಟರ್ನ್ ವೈಟ್ ಕಲರ್'.

'ಇಂಡಿಯನ್ ಮತ್ತು ಯೂರೋಪಿಯನ್ ಜೀನ್ ಸೇರಿ ನನ್ನನ್ನು ಮಿಡಲ್ ಈಸ್ಟರ್ನ್ ಮಾಡಿದೆ. ನಾನು ಒಸಾಮಾ ಬಿನ್ ಲಾಡೆನ್‌ನಂತೆ ಕಾಣಿಸಲ್ಲ ತಾನೇ?'

ಅವಳು ನಕ್ಕಳು, ಗಾಢ ಗುಳಿ ಅವಳ ಎರಡೂ ಕೆನ್ನೆಗಳಲ್ಲಿ ಮೂಡಿದವು.

ನಾನೀಗ ಅವರ ಟೂರ್ ಗೈಡ್ ಆಗಿದ್ದೆ. ಮೊದಲ ಬಾರಿಗೆ ಇಷ್ಟು ಚಿಕ್ಕ ಗುಂಪಿನ ನೇತೃತ್ವವನ್ನು ವಹಿಸಿಕೊಂಡಿದ್ದೆ, ನಾನು ನನ್ನ ಡ್ಯೂಟಿಯನ್ನಂತೂ ಮಾಡಬೇಕಿತ್ತು. ನಾನು ಎಚ್ಚರಿಕೆಯ ಭಂಗಿಯಲ್ಲಿ ಕೆಮ್ಮಿ ಗಂಟಲನ್ನು ಸರಿಪಡಿಸಿಕೊಳ್ಳುತ್ತಾ ಹೇಳಿದೆ, 'ವೆಲ್‌ಕಮ್ ಟೂ ಎಡಿನ್‌ಬರ್ಗ್! ನಾನು ಪಾಲ್ ಸ್ಕಾಟ್, ಈ ಸುಂದರ ದಿನದ ನಿಮ್ಮ ಟೂರ್ ಗೈಡ್...' ಎನ್ನುತ್ತಾ ನಾನೇ ನಕ್ಕೆ.

ನನ್ನ ಪ್ರೇಕ್ಷಕರು ತಲೆಯೆತ್ತಿ ಮೇಲೆ ನೋಡಿದರು. ಆಗಸ ಮೋಡಗಳಿಂದ ಕವಿದಿತ್ತು... ಸೂರ್ಯನ ಬೆಳಕಿಗೆ ಮೋಡಗಳು ತಡೆಯೊಡ್ಡಿದ್ದವು, ಮಂಜು ಆವರಿಸಿತ್ತು.

'ನೀವು ಒಳ್ಳೇ ತಮಾಷೆ ಮಾಡ್ತೀರ. ನಮ್ಮ ಸಮಯ ಚೆನ್ನಾಗಿ ಕಳೆಯುತ್ತೆ. ಅಲ್ಲವೆ ಕರೀನಾ, ಜೋಹಾನಾ?'

ಇಬ್ಬರು ಹುಡುಗಿಯರೂ ನನ್ನನ್ನು ಕುತೂಹಲದಿಂದ ನೋಡುತ್ತಿದ್ದರು, ತಾಯಿಯ ಪ್ರಶ್ನೆಗೆ ಹೌದೆಂದು ತಲೆಯಾಡಿಸಿದರು.

ನಾನು ನನ್ನ ಕಾಲರನ್ನು ಮೇಲೆ ಮಾಡಿಕೊಂಡು ಮತ್ತೆ ಆರಂಭಿಸಿದೆ, 'ನಾವೀಗ ನಗರದ ಒಂದು ಅತ್ಯಂತ ಪ್ರಸಿದ್ಧ ಹಾಗೂ ಅತ್ಯಂತ ದೊಡ್ಡ ಸಾರ್ವಜನಿಕ ಚೌಕ ಶಾರ್ಲೋತೆ ಸ್ಕ್ವಾಯರ್‌ನಲ್ಲಿ ನಿಂತಿದ್ದೇವೆ. ಇಲ್ಲಿಂದ ನಮ್ಮ ಪ್ರಯಾಣವನ್ನು ಮುಂದುವರೆಸೋಣ. ಈ ಚೌಕಕ್ಕೆ ರಾಜ ಜಾರ್ಜ್ ತೃತೀಯ ಪುತ್ರಿಯ ಹೆಸರಿಡಲಾಗಿದೆ. ಪುತ್ರಿಯರು ವಿಶೇಷವಾಗಿರುತ್ತಾರೆ, ಅವರಿಂದ ಸಿಂಹಾಸನಗಳು ಲಭಿಸಿವೆ, ಸಿಂಹಾಸನಗಳು ಕೈತಪ್ಪಿ ಹೋಗಿವೆ.'

ನೀನಾ ಮತ್ತು ಅವಳ ಪುತ್ರಿಯರು ಕಿಲಕಿಲನೆ ನಕ್ಕರು.

ನಾನು ಮುಂದುವರೆಸಿದೆ, 'ಎಡಿನ್‌ಬರ್ಗ್ ಸ್ಕಾಟ್ಲೆಂಡಿನ ರಾಜಧಾನಿ ಎನ್ನುವುದು ಇಡೀ ಜಗತ್ತಿಗೇ ಗೊತ್ತಿದೆ. ಇದೊಂದು ಐತಿಹಾಸಿಕ ಮತ್ತು ಸುಸಂಸ್ಕೃತ ನಗರವಾಗಿದ್ದು ಜಗತ್ತಿನ ಜನ ಇದರ ಮಡಿಲಿನಲ್ಲಿ ಕೂತಿದ್ದಾರೆ. ಈ ನಗರ ಒಂದು ಕೋಟೆಯ ರೂಪದಲ್ಲಿ ಆರಂಭವಾಗಿತ್ತು. ಮುನ್ನೂರು ನಲ್ವತ್ತು ಮಿಲಿಯನ್ ವರ್ಷಗಳ ಹಿಂದೆ ಜ್ವಾಲಾಮುಖಿಯೊಂದು ಸ್ಫೋಟಗೊಂಡಿದ್ದರಿಂದ 'ಕೈಸಾಲ್ ರಾಕ್' ಎಂಬ ಬಂಡೆಯೊಂದು ನಿರ್ಮಾಣಗೊಂಡಿತು. ಕೈಸಾಲ್ ರಾಕ್‌ನಿಂದ ಎಡಿನ್‌ಬರ್ಗ್ ಕೋಟೆ ಅಸ್ತಿತ್ವಕ್ಕೆ ಬಂತು. ಎಡಿನ್‌ಬರ್ಗ್ ಕೋಟೆಗಾಗಿ ಬ್ರಿಟಿಷ್ ಮತ್ತು ಸ್ಕಾಟಿಶ್ ಪ್ರಭುತ್ವ ಸದಾ ತವಕಿಸುತ್ತಿದ್ದವು. ಎಡಿನ್‌ಬರ್ಗ್ ಕೋಟೆಯನ್ನು ಆಳುವುದೆಂದರೆ ಇಡೀ ಸ್ಕಾಟ್ಲೆಂಡನ್ನು ಆಳಿದಂತೆ. ಏಳನೆಯ ಶತಮಾನದಲ್ಲಿ ಬ್ರಿಟಿಷರು ಈ ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಇದಕ್ಕೆ ಎಡಿನ್‌ಬರ್ಗ್ ಎಂದು ಹೆಸರಿಟ್ಟರು. ಬರ್ಗ್ ಎಂಬುದು ಪುರಾತನ ಶಬ್ದವಾಗಿದ್ದು, ಇದರ ಅರ್ಥ ಕೋಟೆ. ಹತ್ತನೆಯ ಶತಮಾನದಲ್ಲಿ ಸ್ಕಾಟ್ಸ್ ಈ ಪ್ರದೇಶವನ್ನು ಮತ್ತೆ ತನ್ನ ವಶಕ್ಕೆ ಪಡೆದ. ಹನ್ನೊಂದನೆಯ ಶತಮಾನದಲ್ಲಿ ರಾಜ ಮೈಲ್ಕಮ್ ತೃತೀಯ ಕೈಸಾಲ್ ರಾಕಿನ ಮೇಲೆ ಅರಮನೆಯೊಂದನ್ನು ನಿರ್ಮಿಸಿದ; ಈ ಸ್ಥಳ ಕ್ರಮೇಣ ಒಂದು ನಗರವಾಗಿ ಬೆಳೆಯಲಾರಂಭಿಸಿತು; ಹನ್ನೆರಡನೆಯ ಶತಮಾನದ ವೇಳೆಗೆ ಎಡಿನ್‌ಬರ್ಗ್ ಒಂದು ಸಮೃದ್ಧ ನಗರವಾಯಿತು. ಮೇಡಮ್ಸ್! ಇಂದು ನಾವು ಎಡಿನ್‌ಬರ್ಗ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುತ್ತಾಡೋಣ. ನಗರದ ಪ್ರಮುಖ ಆಕರ್ಷಕ ಸ್ಥಳಗಳನ್ನು ನೋಡೋಣ. ನಾನು ನಿಮ್ಮೊಂದಿಗೆ ಮೂರು ಗಂಟೆಗಳ ಕಾಲ ಇರುತ್ತೇನೆ. ನಂತರ ನಿಮ್ಮ ಗೈಡ್ ಆದ ನಾನು ನಿಮ್ಮನ್ನು ಇಲ್ಲಿಗೇ